# 'ಲವ್ಲಿ–ಅಲಿ' ಪ್ರಚಂಡ ಪುಟಾಣಿಗಳು






ಭಿಕ್ಷುಕಿಯಾಗಿದ್ದ ರಾನು ಮೊಂಡಾಲ್ ಈಚೆಗಷ್ಟೇ ಸಾಮಾಜಿಕ ಮಾಧ್ಯಮಗಳಿಂದಾಗಿ ದಿನಬೆಳಗಾಗುವಲ್ಲಿ ಸ್ಟಾರ್ ಗಾಯಕಿ ಆದರು. ಅದೇ ರೀತಿ, ವಿಡಿಯೊ ಸಹಿತ ಒಂದು ಟ್ವೀಟ್‌ನಿಂದಾಗಿ ಕೋಲ್ಕತ್ತಾದ ಜಾಯ್ ನಗರದ 11 ವರ್ಷದ ಜಾಶಿಕಾ ಖಾನ್ ಹಾಗೂ 12 ವರ್ಷದ ಅಜಾಜುದ್ದೀನ್ 'ಸ್ಟಾರ್' ಪುಟಾಣಿಗಳಾಗಿದ್ದಾರೆ.

ರಾನು ಮೊಂಡಾಲ್‌ಗೆ ಅವರ ಕಂಠಸಿರಿ ಸ್ಟಾರ್ ಪಟ್ಟ ತಂದುಕೊಟ್ಟರೆ, ಈ ಪುಟಾಣಿಗಳಿಗೆ 'ಜಿಮ್ನಾಸ್ಟಿಕ್' ಕಲೆ ಸ್ಟಾರ್ ಪಟ್ಟ ಮುಡಿಗೇರಿಸಿದೆ. ಜೊತೆಗೆ ಆಕಾಶದೆತ್ತರಕ್ಕೆ ಜಿಗಿಯುವ ಕನಸಿನ ರೆಕ್ಕೆಗೆ ಇನ್ನಷ್ಟು ಬಲ ಬಂದಿದೆ.

ಜಾಶಿಕಾ ಖಾನ್ ಹಾಗೂ ಅಜಾಜುದ್ದೀನ್ ಸ್ನೇಹಿತರು. ಶಾಲೆಗೆ ಹೋಗುವುದು ಜೊತೆಯಲ್ಲೇ. ಜಾಶಿಕಾಗೆ 'ಲವ್ಲಿ' ಹಾಗೂ ಅಜಾಜುದ್ದೀನ್‌ಗೆ 'ಅಲಿ' ಅನ್ನೊ ಅಡ್ಡ ಹೆಸರೂ ಇದೆ. ಅದೊಂದು ದಿನ ಬೆಳಿಗ್ಗೆ ಎಂದಿನಂತೆ ಶಾಲೆಗೆ ನಡೆದುಕೊಂಡು ಹೊರಟಿದ್ದ ಲವ್ಲಿ, ಜಂಪ್ ಮಾಡುವಂತೆ ಅಲಿಗೆ ಕೇಳಿದಳು. ಅವನು ತಡಮಾಡದೇ ಜಂಪ್ ಮಾಡಿಯೇ ಬಿಟ್ಟ.

'ನಾನೇನು ನಿನಗಿಂತ ಕಮ್ಮಿಯೇ' ಎನ್ನುವಂತೆ ಲವ್ಲಿ ಡಬಲ್ ಜಂಪ್ ಮಾಡಿದ್ದಳು. ಸ್ಥಳದಲ್ಲಿದ್ದ ವ್ಯಕ್ತಿಯೊಬ್ಬರು ಅವರಿಬ್ಬರ ಸ್ಟಂಟ್ ಅನ್ನು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟದ್ದೇ ತಡ, ಈ ಪುಟಾಣಿ ಜೋಡಿ ಪ್ರಸಿದ್ಧಿಗೆ ಬಂದುಬಿಟ್ಟಿದೆ. ಆ ವಿಡಿಯೊ ಸಾಗರದಾಚೆಗೂ ತಲುಪಿದ್ದು ಕ್ರೀಡಾಲೋಕದ ದಿಗ್ಗಜರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ; ಮುಂದೊಮ್ಮೆ ಈ ಮಕ್ಕಳು ಜಿಮ್ನಾಸ್ಟಿಕ್ ಪಟು ಆಗುತ್ತಾರೆ ಎಂದು ನುಡಿದಿದ್ದಾರೆ.

### ವಿಶ್ವ ಜಿಮ್ನಾಸ್ಟಿಕ್ ರಾಣಿಯೇ ಫಿದಾ!

ರಬ್ಬರ್ ಚೆಂಡಿನಂತೆ ರಸ್ತೆಯಲ್ಲೇ ಭಂಗನೆ ಜಿಗಿದು ಗಮನಸೆಳೆದ ಚಿನಕುರಳಿಗಳ ವಿಡಿಯೊವು ವಿಶ್ವ ಜಿಮ್ನಾಸ್ಟಿಕ್ ರಾಣಿ ಖ್ಯಾತಿಯ 57 ವರ್ಷದ ನಾಡಿಯಾ ಕೊಮಾನೆಸಿ ಗಮನಸೆಳೆದಿದೆ. ತನ್ನ ಟ್ವಿಟರ್ ಖಾತೆಯಲ್ಲಿ ಆ ವಿಡಿಯೊವನ್ನು ಅಪ್‌ಲೋಡ್ ಮಾಡುವುದರ ಜೊತೆಗೆ 'ಇದು ನಿಜಕ್ಕೂ ಅದ್ಭುತ' ಎಂದವರು ಕೊಂಡಾಡಿದ್ದಾರೆ.

ಜಿಮ್ನಾಸ್ಟಿಕ್ಸ್‌ನಲ್ಲಿ 10ಕ್ಕೆ ಹತ್ತೂ ಅಂಕಗಳನ್ನು ಪಡೆದು ಅದ್ವಿತೀಯ ಸಾಧನೆ ಮಾಡಿರುವ ನಾಡಿಯಾ ಒಲಿಂಪಿಕ್‌ನ ಜಿಮ್ನಾಸ್ಟಿಕ್ಸ್ ವಿಭಾಗದಲ್ಲಿ 5 ಬಾರಿ ಚಿನ್ನದ ಪದಕ ಪಡೆದಿದ್ದಾರೆ. ಅವರು ವಿಡಿಯೊ ಶೇರ್ ಮಾಡಿ ಈ ಪ್ರತಿಭಾವಂತ ಮಕ್ಕಳ ಅತ್ಯದ್ಭುತ ಪ್ರತಿಭೆಗೆ ನಿಜವಾದ ತೂಕ ತಂದುಕೊಟ್ಟಿದ್ದಾರೆ.

ಕ್ರೀಡಾ ಸಚಿವ ಕಿರಣ್ ರಿಜಿಜೂ ಕೂಡ ವಿಡಿಯೊ ಕಂಡು ಫಿದಾ ಆಗಿದ್ದು, ಆ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. 'ಈ ಮಕ್ಕಳು ಅದ್ಭುತ ಪ್ರತಿಭಾವಂತರು. ಇವರನ್ನು ಜಿಮ್ನಾಸ್ಟಿಕ್ ಅಕಾಡೆಮಿಗೆ ಸೇರಿಸಲು ಯಾರಾದರೂ ನನ್ನ ಬಳಿ ಕರೆತನ್ನಿ. ಅವರ ಭವಿಷ್ಯ ರೂಪಿಸಲು ನಾನು ಸಿದ್ಧನಿದ್ದೇನೆ' ಎಂದಿದ್ದಾರೆ. ಭಾರತೀಯ ಕ್ರೀಡಾ ಮಂಡಳಿಯು ಪುಟಾಣಿಗಳಿಗೆ ನೆರವು ನೀಡುವ ಭರವಸೆ ನೀಡಿದೆ.

'ಜಿಮ್ನಾಸ್ಟಿಕ್ ಅನ್ನು ಕೆಲ ತಿಂಗಳುಗಳಿಂದ ಅಭ್ಯಾಸ ಮಾಡುತ್ತಿದ್ದೇವೆ. ಎಲ್ಲರ ಬೆಂಬಲ ಸಿಗುತ್ತಿರುವುದು ನಿಜಕ್ಕೂ ಖುಷಿಯ ವಿಚಾರ. ಅಮ್ಮ, ಅಪ್ಪ ಮತ್ತು ಕ್ರೀಡಾಮಂತ್ರಿಯೂ ಬೆಂಬಲ ಕೊಟ್ಟಿದ್ದಾರೆ. ಇದೇ ಕ್ಷೇತ್ರದಲ್ಲಿ ಮುಂದುವರೆಯುತ್ತೇವೆ' ಎನ್ನುವುದು ಲವ್ಲಿ ಮಾತಾದರೆ, 'ಈ ತರಹದ ಸ್ಟಂಟ್ ಮಾಡಲು ಅಪ್ಪ–ಅಮ್ಮ ಹೆದರುತ್ತಿದ್ದರು. ತುಂಬಾನೇ ಬೈತಿದ್ರು. ಇದನ್ನೆಲ್ಲಾ ಬಿಟ್ಬಿಡಿ, ಡಾನ್ಸ್ ಎಲ್ಲಾ ಬಿಟ್ಬಿಡಿ ಅಂತ ಹೇಳುತ್ತಿದ್ದರು. ಅವರಿಗೆ ಗೊತ್ತಿಲ್ಲದೇ ನಾನು ಕಲಿಯುತ್ತಿದ್ದೆ. ಈಗವರು ಖುಷಿಪಡುತ್ತಿದ್ದಾರೆ' ಎಂದು ಸಂತಸ ವ್ಯಕ್ತಪಡಿಸುತ್ತಾನೆ ಅಲಿ. ಇವರಿಬ್ಬರು ಸ್ಟಂಟ್ ಜೊತೆಗೆ ಮನಸೆಳೆಯುವ ನೃತ್ಯವನ್ನೂ ಮಾಡುತ್ತಾರೆ.

■ **ಶಶಿಕುಮಾರ್ ಸಿ.**



ಅಲಿ–ಲವ್ಲಿ

### ಟಯರ್ ಫಿಟ್ಟರ್ ಇವರ ಗುರು!

ಲವ್ಲಿ–ಅಲಿ ಜೋಡಿಯ ಜಿಮ್ನಾಸ್ಟಿಕ್ ಗುರು ಒಬ್ಬ ಟಯರ್ ಫಿಟ್ಟರ್ ಎಂಬುದು ಮತ್ತೊಂದು ವಿಶೇಷ. ಅವರ ಹೆಸರು ಶೇಖರ್ ರಾವ್. ಟಯರ್ ಫಿಟ್ಟರ್ ಆಗಿ ಕೆಲಸ ಮಾಡುತ್ತಿರುವ ಅವರು ಡಾನ್ಸ್ ಕಮ್ ಸ್ಟಂಟ್ ಮಾಸ್ಟರ್ ಆಗಿದ್ದಾರೆ. ಕೆಲಸದ ಬಿಡುವಿನ ವೇಳೆಯಲ್ಲಿ ಸುತ್ತಮುತ್ತಲಿನ ಮಕ್ಕಳಿಗೆ ಉಚಿತವಾಗಿ ಡಾನ್ಸ್ ಹಾಗೂ ಸ್ಟಂಟ್ ಮಾಡುವುದನ್ನು ಕಲಿಸಿಕೊಡುತ್ತಿದ್ದಾರೆ.

ದೊಡ್ಡ ಡ್ಯಾನ್ಸರ್, ಸ್ಟಂಟ್ ಮಾಸ್ಟರ್ ಆಗಬೇಕು ಅಂತ ಕನಸು ಕಂಡಿದ್ದ ಅವರು ಬಡತನದಿಂದಾಗಿ ಆ ಕನಸನ್ನು ನನಸಾಗಿಸುವಲ್ಲಿ ವಿಫಲರಾಗಿದ್ದರು. ಆದರೆ, ತನ್ನಲ್ಲಿರುವ ಪ್ರತಿಭೆಯನ್ನು ಬೇರೆ ಮಕ್ಕಳಿಗೆ ಕಲಿಸಿ ಅವರ ಮೂಲಕ ತನ್ನಾಸೆಯನ್ನು ಈಡೇರಿಸಿಕೊಳ್ಳುತ್ತಿದ್ದಾರೆ.

ವಿಡಿಯೊ ವೀಕ್ಷಣೆಗೆ bit.ly/2lWWZ8m ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.